# ಚಾಪೆಲ್! ಲೂಸರ್ನ್ ನಗರದ ಕಾಮನಬಿಲ್ಲು



**ಹಿಮಪರ್ವತಗಳ ಖ್ಯಾತಿಯ ಸ್ವಿಟ್ಜರ್ಲೆಂಡ್‌ನಲ್ಲಿನ ಚಾಪೆಲ್ ಸೇತುವೆ ಎನ್ನುವ ಮರದ ರಚನೆಯೂ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿದೆ. ಏಳುನೂರು ವರ್ಷಗಳಷ್ಟು ಹಳೆಯದಾದ ಈ ಸೇತುವೆ ಜೀವಂತ ಕಲಾಕೃತಿಯಂತೆ ಕಾಣಿಸುತ್ತದೆ.**

**■ ಬನವಾಸಿ ಕೃಷ್ಣಮೂರ್ತಿ**

ಸ್ವಿಟ್ಜರ್ಲೆಂಡ್ ಎಂದ ತಕ್ಷಣ ನೆನಪಿಗೆ ಬರುವುದು ಅಲ್ಲಿನ ಹಿಮಪರ್ವತಗಳು. ಆಲ್ಪ್ಸ್ ತಪ್ಪಲಲ್ಲಿ ಹಿಮದ ಹಾಸಿನಲ್ಲಿ ಓಡಾಡುವ ಹೊರಳಾಡುವ ರಮ್ಯ ಚಿತ್ರಗಳನ್ನು ದೃಶ್ಯ ಮಾಧ್ಯಮ ನಮ್ಮ ಮನಸ್ಸುಗಳಲ್ಲಿ ಛಾಪಿಸಿದೆ. ಆದರೆ, ಈ ದೇಶದ ಪ್ರವಾಸಿ ನಕ್ಷೆಯಲ್ಲಿ ಮರದ ಸೇತುವೆ ಕೂಡ ಪ್ರಮುಖ ಸ್ಥಾನ ಪಡೆದಿದೆ. ಈ ಸೇತುವೆಯನ್ನು 'ಚಾಪೆಲ್ ಬ್ರಿಡ್ಜ್' ಎನ್ನುತ್ತಾರೆ.

'ಚಾಪೆಲ್ ಸೇತುವೆ' ಇರುವುದು ದಕ್ಷಿಣ ಸ್ವಿಟ್ಜರ್ಲೆಂಡ್‌ನಲ್ಲಿರುವ ಲೂಸರ್ನ್ ನಗರದಲ್ಲಿ. ಮರದ ಈ ಸೇತುವೆಯನ್ನು ಕ್ರಿ.ಶ. 1367ರಲ್ಲಿ ನಿರ್ಮಿಸಲಾಗಿದೆ. ಸಂಪೂರ್ಣ ಮರದಿಂದಲೇ ನಿರ್ಮಾಣ ಮಾಡಲಾಗಿರುವ ಈ ಸೇತುವೆಯನ್ನು ಒಂದು ಅದ್ಭುತ ಕಲಾಕೃತಿ ಎನ್ನುವುದೋ ಅಥವಾ ಹಲವು ಅಸಾಧಾರಣ ಕಲಾಕೃತಿಗಳ ಸಂಕಲನ ಎನ್ನಬೇಕೋ ಎನ್ನುವ ಗೊಂದಲ ಸಹೃದಯರಲ್ಲಿ ಉಂಟಾದರೆ ಆಶ್ಚರ್ಯವೇನೂ ಇಲ್ಲ.

ಸೇತುವೆಯ ಮೇಲ್ಛಾವಣಿಯ ಮೇಲೆ ಬಣ್ಣದ ಚಿತ್ರಗಳನ್ನು ಬಿಡಿಸಲಾಗಿದೆ. ಆ ಚಿತ್ರಗಳನ್ನು ನೋಡುವುದೇ ಒಂದು ಸೊಗಸು. ಈ ಸೇತುವೆಯನ್ನು, ಇಲ್ಲಿಯ ರಿಯಾಸ್ ನದಿಗೆ ಹೊಂದಿಕೊಂಡಿರುವ ಲೂಸರ್ನ್ ಎನ್ನುವ ಸರೋವರಕ್ಕೆ ಅಡ್ಡವಾಗಿ ಕಟ್ಟಲಾಗಿದೆ.

ಹಿನ್ನೆಲೆಯಲ್ಲಿ ಸರೋವರದ ಚೆಲುವನ್ನೂ ನಗರದ ಪಕ್ಷಿನೋಟವನ್ನೂ ಕಣ್ತುಂಬಿಕೊಳ್ಳುವುದು ಒಂದು ಅದ್ಭುತ ಅನುಭವ. ನಾಗರಿಕತೆಗೂ ನೀರಿಗೂ ಇನ್ನಿಲ್ಲದ ನಂಟು. ಆದರೆ, ನಾಗರಿಕತೆಯ ಭರಾಟೆಯಲ್ಲಿ ನೀರಿನ ಪ್ರಾಕೃತಿಕ ತಾವುಗಳಿಂದ ಮನುಷ್ಯ ದೂರ ಹೋಗುತ್ತಿರುವುದು ಇಂದಿನ ವಿದ್ಯಮಾನ. ಆದರೆ, ಲೂಸರ್ನ್‌ನಂತಹ ಕೆಲವು ಊರುಗಳಷ್ಟೇ ನೀರಿನೊಂದಿಗಿನ ಕಳ್ಳುಬಳ್ಳಿ ಸಂಬಂಧವನ್ನು ಜತನದಿಂದ ಕಾಪಿಟ್ಟುಕೊಂಡಿವೆ.

ಹಳೆಯ ಸೇತುವೆಯ ಪಕ್ಕದಲ್ಲಿಯೇ ಒಂದು ವಾಟರ್ ಟವರ್ ಕೂಡ ಇದೆ. ಅಂದಹಾಗೆ, ಏಳುನೂರು ವರ್ಷಗಳ ಈ ಸೇತುವೆ ಆತಂಕದ ಕ್ಷಣಗಳನ್ನೂ ಎದುರಿಸಿದೆ. 1993ರಲ್ಲಿ ಈ ಐತಿಹಾಸಿಕ ಸೇತುವೆ ಬೆಂಕಿಗೆ ಆಹುತಿಯಾಗಿತ್ತು. ಆದರೆ, ಬೆಂಕಿಯ ಕೆನ್ನಾಲಗೆಗಳಿಂದ ಸೇತುವೆಯ ಹಳೆಯ ಮರದ ಕಂಬಗಳನ್ನು ಜತನದಿಂದ ಕಾಪಾಡಲಾಗಿತ್ತು. ಅಷ್ಟು ಮಾತ್ರವಲ್ಲ, ಕೇವಲ ಒಂದೇ ವರ್ಷದ ಅವಧಿಯಲ್ಲಿ ಸೇತುವೆಯನ್ನು ಪುನರ್ ನಿರ್ಮಿಸಲಾಗಿತ್ತು.

ಜಗತ್ತಿನ ಹಳೆಯ ಪಾರಂಪರಿಕ ಸೇತುವೆಗಳ ಪೈಕಿ ಈ ಚಾಪೆಲ್ ಬ್ರಿಜ್ ಕೂಡ ಒಂದು. ಇದೊಂದು ಮನುಷ್ಯ ನಿರ್ಮಿತ ನಿರ್ಜೀವ ರಚನೆಯಂತೆ ಭಾಸವಾಗುವುದೇ ಇಲ್ಲ. ಲೂಸರ್ನ್ ನಗರದ ಅತಿ ಹಿರಿಯ ಪ್ರತಿನಿಧಿಯಂತೆ ಕಾಣಿಸುತ್ತದೆ. ನಗರದ ಜೊತೆಗೆ ಸ್ವಿಟ್ಜರ್ಲೆಂಡ್‌ನ ಚರಿತ್ರೆಯ ಕಥನವನ್ನೂ ಸೇತುವೆ ಪಿಸುಗುಡುವಂತಿದೆ.